ಆ ಮೇಲೆ ಸಿಕ್ತೇನೆ' ಎಂದು ಹೇಳುತ್ತಾ ರಾಜಬೀದಿಯತ್ತ ರಪರಪನೆ ಹೆಜ್ಜೆ ಹಾಕಿದ್ದ.

ಚಿನ್ನಾಚಾರಿಯ ಸಮಾಧಾನದ ಮಾತಿನಿಂದ ಒಂದಷ್ಟು ತಲೆ ಹಗುರ ಮಾಡಿಕೊಂಡ ಪಟೇಲ ದೇವಪ್ಪ ಶೆಟ್ಟರು, ಮತ್ತೆ ತಮ್ಮ ಮನಸ್ಸನ್ನು ಬದಲಾಯಿಸಿಕೊಂಡವರೇ, 'ಮೊದ್ಲು ಆಗಮಶಾಸ್ತ್ರವನ್ನು ಓದಿ ಅರೆದು ಕುಡಿದಿರುವ ವಾಸುತಂತ್ರಿಗಳಲ್ಲೇ ಒಂದು ಮಾತು ಕೇಳಿಬಿಡುವ; ನಂತರ ನಮ್ಮ ಶ್ರೀಧರಾಚಾರಿಯಲ್ಲಿ ಕೇಳಿದರಾಯಿತು...' ಎಂದು ನಿರ್ಧರಿಸಿ ಕೈನಾಲು ಜೋಯಿಸ್ರ ಮನೆ ಕಡೆ ದಾಪುಗಾಲು ಹಾಕುತ್ತಿದ್ದಾಗ, ಮೀನಕಳಿಯದ ಬೆಸ್ತರ ಗುರಿಕಾರ(ಮುಖಂಡ) ಪೂವ ಮರಕಾಲ ಯಾವುದೋ ಕೆಲಸದ ಮೇಲೆ ಶ್ರೀಧರಾಚಾರಿಯೆ ಆಚಾರಿ ಕೊಟ್ಯದೆಡೆಗೆ ಬಂದವನು, ಶ್ರೀಧರಾಚಾರಿಯನ್ನು ಕಂಡು ಮಾತಾಡಿ, ಮರಳಿ ರಾಜಬೀದಿಯ ಕಡೆ ಮರಳುತ್ತಿದ್ದವ ಇವರ ಕಣ್ಣಿಗೆ ಬಿದ್ದುಬಿಟ್ಟ.

ಆತನನ್ನು ಕಂಡೊಡನೆ ಪಟೇಲರು, 'ಯುಗಾದಿಗೆ ಉದುರುವ ಮಳೆ ಹನಿಗಳನ್ನು ಕಂಡೊಡನೆ ಮಾವು –ಬೇವುಗಳು ಎಷ್ಟು ಉಲ್ಲಸಿತಗೊಳ್ಳುವವೋ...' ಅಷ್ಟು ಉಲ್ಲಸಿತರಾಗಿಬಿಟ್ಟರು. ದೇವಪ್ಪಶೆಟ್ಟರು, ಪೂವ ಮರಕಾಲನನ್ನು ಕಂಡವರೆ, ಹೀರೇಹೂವಿನಂತೆ ಪೂರ್ತಿ ಮುಖವರಳಿಸುತ್ತ 'ಅಲ್ಲವೊ ಮಾರಾಯ... ನಿನ್ನನ್ನು ಆ ಜುಮಾದಿ ದೈವವೇ ನನ್ನೆದುರಿಗೆ ಇಲ್ಲಿಗೆ ಕಳಿಸಿದ್ದು ಅಂತ ಕಾಣಿಸುತ್ತೆ, ಬೇರೆ ಯಾರೂ ಅಲ್ಲ' ಎಂದು ಅಂದೊಡನೆ ಆತ,

'ಸಾಯ್ಲಿ... ಇದೆಂಥಾ ಮಾತು ನಿಮ್ದು!? ನೀವು ಹೇಳಿ ಕಳಿಸ್ಸಿದ್ರೆ ನಾನೇ ಬರ್ತಿರ್ಲಿಲ್ವಾ? ನೀವೂ ನನ್ನ ಕಷ್ಟಕ್ಕೆ ಒದಗಿದ್ದೇನು ಸ್ವಲ್ಪವಾ?... ಹೇಳಿ ಧನಿಗಳೇ... ನನ್ನಿಂದ ಏನಾಗ್ಬೇಕು ಹೇಳಿ... ಹೇಳಿ...'

'ಅಂತದ್ದೇನಿಲ್ಲ ಮಾರಾಯ... ನಮ್ಮ ಜುಮಾದಿ ದೈವದ ಕೆಲಸ ಶುರುವಾಗಿದ್ದು ನಿಂಗೆ ಗೊತ್ತೇ ಉಂಟಲ್ವ. ಆದ್ರೆ ಕೆಲಸ ಕುಂಟುತ್ತ ಸಾಗ್ತಾ ಇದೆ... ಈಗ ಕೊಡಿಮರದ ಕೆಲಸ ಶುರುಮಾಡ್ಬೇಕು. ಕೊಡಿಮರಕ್ಕೆ ಮರ ಕಡಿದು, ಆ ಮರದ ತೊಗಟೆ ಜಾರಿಸಿ... ಆ ದಿಂಡನ್ನು ಮುಂದೆ ನಲವತ್ತೈದು ದಿವಸ ಎಳ್ಳೆಣ್ಣೆಯಲ್ಲಿ ಮುಳುಗಿಸಿಡುವ ಕ್ರಮವೆಲ್ಲ ನಿಂಗೆ ಗೊತ್ತೇ ಉಂಟಲ್ವ...'

'ನೀವೇನು ದನಿಗಳೆ ನಂಗೆ ಹೊಸ ಹರಿಕತೆ ಹೇಳುದು? 'ಕೊಡಿಮರ'ಕ್ಕೆ ತರುವ ಮರದ ತೊಗಟೆಯನ್ನೆಲ್ಲ ಜಾರಿಸಿ, ಅದರ ಒಳದಿಂಡನ್ನು ದೊಡ್ಡ ಓಡದಲ್ಲಿ(ದೋಣಿಯಲ್ಲಿ) ತುಂಬಿಸಿಟ್ಟ ಎಳ್ಳೆಣ್ಣೆಯಲ್ಲಿ ಮುಳುಗಿಸಿಡುವ ಕತೆಯನ್ನು ನೀವು ಹೇಳುದಕ್ಕೆ ಹೊರಟಿದ್ದಲ್ವ ಈಗ...'

'ಅದೇ ಮಾರಾಯ!... ಅದೇ... ಅದೇ... ನಿನ್ನಿಂದ ಉಪಕಾರ ಆಗಬೇಕಾದ್ದೂ ಅದೇ; ಎಳ್ಳೆಣ್ಣೆ ತುಂಬುವುದಕ್ಕೆ ನಮಗೆ ಒಂದು ದೊಡ್ಡ ಓಡ ಬೇಕಲ್ವ; ಅದನ್ನು ಕೊಡುವ ಬೆಸ್ತರ ಗುರಿಕಾರ ಈಗ ನನ್ನ ಕಣ್ಣೆದುರೇ ಸಿಕ್ಕಿ ಬಿಟ್ಟನಲ್ಲ!... '

'ಅದಕ್ಯಾಕೆ ನೀವು ಇಷ್ಟು ತಲೆ ಅಡ್ಡ ಹಾಕುದು... ಪಟ್ಲೆರೆ!? ಪುರಾಕಿನ(ಪುರಾತನ) ಕಾಲದಿಂದಲೂ ನಮ್ಮ ಸುತ್ತಲ ನಾಲ್ಕೂರಿನ ದೈವದೇವಸ್ಥಾನಗಳಲ್ಲಿ 'ಕೊಡಿಮರ' ಮಾಡುವುದಾದರೆ, ಆ ಮರದ ದಿಂಡನ್ನು ಎಣ್ಣೆಯಲ್ಲಿ ಮುಳುಗಿಸಿಡುವುದಕ್ಕೆ ಅಷ್ಟು ದೊಡ್ಡ ಓಡವನ್ನು ಅವರಿಗೆ ಕೊಡುತ್ತಿದ್ದವರು ಯಾರು? ನಾವೇ ಅಲ್ವೇ. ನಮ್ಮ ಊರಿನ ದೈವದ ಕಾರ್ಯಕೆ ನಾವು ಒದಗಿ ಬರದಿದ್ದರೆ ಆ ದೈವ ನಮ್ಮನ್ನು ಬಿಡುತ್ತಾ?... ಆಯ್ತು... ಆ ಓಡವನ್ನು ಯಾವಾಗ ಕಳಿಸ್ಬೇಕು ಹೇಳಿ, ನಾಳೆ ರಂಪಣಿಗೆ ಇಳಿಯುವ ಮೊದಲೇ ನಮ್ಮ ಹುಸೇನ್‌ಬ್ಯಾರಿಯ ಲಾರಿಗೇರಿಸಿ ಕಳಿಸ್ಲಾ?...'